**ಎಸ್.ಸಿ.ಸಂಖ್ಯೆಃ10022/2025**
**ಪ್ರಾ.ಸಾ.ಸಂಖ್ಯೆಃ 14**
**ಚಾ.ಸಾ.ಸಂಖ್ಯೆಃ 21**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10022/2025**

| | |
|---|---|
| ಹೆಸರುಃ | ಮಲ್ಲಿಕಾರ್ಜುನ ಬಿರಾದಾರ |
| ತಂದೆಯ ಹೆಸರುಃ | ಭೀಮಶಿ ಬಿರಾದಾರ |
| ವಯಸ್ಸುಃ | **50** ವರ್ಷ |
| ಉದ್ಯೋಗಃ | ಪಿ.ಐ.ಲೋಕಾಯುಕ್ತ ಪಿ.ಎಸ್., ಬಾಗಲಕೋಟೆ |
| ವಾಸಃ | ಬಾಗಲಕೋಟೆ. |

**ಸಾಕ್ಷಿಯನ್ನು ದಿಃ 13.03.2026 ರಂದು ವಿ.ಸಿ. ಮೂಲಕ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

ನಾನು ದಿಃ **06.11.2019** ರಿಂದ ದಿನಾಂಕಃ **02.04.2021** ರವರೆಗೆ ಮುಧೋಳ ಪೋಲೀಸ ಠಾಣೆಯ ಪಿ.ಎಸ್.ಐ. ಆಗಿ ಕೆಲಸ ಮಾಡಿದ್ದೇನೆ.

**1.** ದಿ: **31.01.2023** ರಂದು ಬೆಳಿಗ್ಗೆ **8-30** ಗಂಟೆಗೆ ಠಾಣೆಯಲ್ಲಿದ್ದಾಗ ಲೋಕಾಪೂರದ ಸಾಯಿ ಆಸ್ಪತ್ರೆಯಿಂದ ಎಮ್.ಎಲ್.ಸಿ. ಮಾಹಿತಿ ಬಂದಿದ್ದು, ಅದರಂತೆ ನಾನು ಸದರಿ ಸಾಯಿ ಆಸ್ಪತ್ರೆಗೆ ಭೇಟಿ ನೀಡಿದಾಗ ಚಾಸಾ-**10** ಹಲ್ಲೆಯ ಹಿನ್ನೆಲೆಯಲ್ಲಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವುದು ತಿಳಿಯಿತು. ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಾಗಲಕೋಟೆಗೆ ಕರೆದುಕೊಂಡು ಹೋದರು. ನಂತರ ಕೆರೂಡಿ ಆಸ್ಪತ್ರೆಯಿಂದ ಮತ್ತೇ ಎಮ್.ಎಲ್.ಸಿ. ಮಾಹಿತಿ ಬಂತು. ನಾನು ಕೆರೂಡಿ ಆಸ್ಪತ್ರೆಗೆ ಹೋಗುವಷ್ಟರಲ್ಲಿ ಚಾಸಾ-**1** ರವರು ಠಾಣೆಗೆ ಹಾಜರಾಗಿ ನಿಪಿ-**10** ರಂತೆ ದೂರು ನೀಡಿದ್ದು, ಅದರಂತೆ ನಮ್ಮ ಠಾಣಾ ಗುನ್ನಾ ನಂ. **23/2023** ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಈಗ ನಾನು ನೋಡುತ್ತಿರುವ ಪ್ರ.ವ.ವರದಿಯನ್ನು ತಯಾರಿಸಿದ್ದೇನೆ. (ಅದನ್ನು ನಿಪಿ-**34** ಅಂತ ಗುರುತಿಸಲಾಯಿತು). ಸದರಿ ದೂರು ಮತ್ತು ಪ್ರ.ವ.ವ.ರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

**2.** ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-**1** ರವರು ತೋರಿಸಿದ ಜಾಗೆಯನ್ನು ಚಾಸಾ-**2** ಹಾಗೂ **3** ಇವರ ಸಮಕ್ಷಮದಲ್ಲಿ ಗುನ್ನಾ ಜಾಗೆ ಪಮಚನಾಮೆಯನ್ನು ನಿಪಿ-**11** ರಂತೆ ಮಾಡಿರುತ್ತೇನೆ. ನಿಪಿ-**12** ರಂತೆ ಕಚ್ಚಾ

**ಎಸ್.ಸಿ.ಸಂಖ್ಯೆ:10022/2025**
**ಪ್ರಾ.ಸಾ.ಸಂಖ್ಯೆ: 14**
**ಚಾ.ಸಾ.ಸಂಖ್ಯೆ: 21**

ನಕ್ಷೆ ತಯಾರಿಸಿದ್ದೇನೆ. ಸ್ಥಳದಿಂದ ಮುಮಾ-**1** ರಿಂದ **6** ಇವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಮಧ್ಯಾಹ್ನ **3-30** ರಿಂದ **4-30** ರ ಅವಧಿಯಲ್ಲಿ ಚಾಸಾ-**1** ರವರು ಚಾಸಾ-**2** ಹಾಗೂ **3** ರವರ ಸಮಕ್ಷಮದಲ್ಲಿ ಗಾಯಾಳುವಿನ ರಕ್ತ ಹತ್ತಿದ ಬಟ್ಟೆಗಳಾದ ಮುಮಾ-**7** ರಿಂದ **9** ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-**14** ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಈಗ ನೋಡುತ್ತಿರುವ ನಿಪಿ-**15** ರಂತೆ ಫೋಟೊ ತೆಗೆಸಿರುತ್ತೇನೆ.

**3.** ಅದೇ ದಿನ ಚಾಸಾ-**11** ಹಾಗೂ **15** ಇವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅವರು ನನ್ನ ಮುಂದೆ ನಿಪಿ-**17** ಹಾಗೂ **18** ರಂತೆ ಹೇಳಿಕೆಗಳನ್ನು ಕೊಟ್ಟಿರುತ್ತಾರೆ. ದಿ: **01.02.2023.** ರಂದು ಚಾಸಾ-**10** ಇವರು ನನ್ನ ಮುಂದೆ ನಿಪಿ-**16** ರಂತೆ ಹೇಳಿಕೆ ನೀಡಿದ್ದಾರೆ. ಗಾಯಾಳುವಿನ ರಕ್ತದ ಗುಂಪನ್ನು ತಿಳಿಸುವ ಬಗ್ಗೆ ಚಾಸಾ-**17** ಇವರಿಗೆ ಮನವಿ ನೀಡಿದೆ. (ಸದರಿ ಮನವಿಯನ್ನು ನಿಪಿ-**35** ಅಂತ ಗುರುತಿಸಲಾಯಿತು). ಅದೇ ದಿನ ಚಾಸಾ-**12** ರಿಂದ **14** ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅವರು ನನ್ನ ಮುಂದೆ ನಿಪಿ-**17, 29** ಮತ್ತು **30** ರಂತೆ ಹೇಳಿಕೆ ನೀಡಿರುತ್ತಾರೆ.

**4.** ದಿ: **07.02.2023** ರಂದು ಕೆರೂಡಿ ಆಸ್ಪತ್ರೆಯ ವೈದ್ಯರು ಈಗ ನೋಡುತ್ತಿರುವ ರಕ್ತದ ಗುಂಪಿನ ಪ್ರಮಾಣ ಪತ್ರ ನೀಡಿರುತ್ತಾರೆ. (ಅದನ್ನು ನಿಪಿ-**36** ಅಂತ ಗುರುತಿಸಲಾಯಿತು). ದಿ: **10.02.2023** ರಂದು ರಕ್ತ ಹತ್ತಿದ ಮುದ್ದೆಮಾಲುಗಳನ್ನು ಆರ್.ಎಫ್.ಎಸ್.ಎಲ್. ಬೆಳಗಾವಿ ಇವರಿಗೆ ಪರೀಕ್ಷೆಗಾಗಿ ಚಾಸಾ-**18** ರವರ ಮೂಲಕ ಕಳುಹಿಸಿಕೊಟ್ಟೆ. ಅದೇ ದಿನ ಚಾಸಾ-**18** ಇವರು ಮುದ್ದೆಮಾಲುಗಳನ್ನು ಕೊಟ್ಟು ನಿಪಿ-**3** ರಂತೆ ಹಿಂಬರಹವನ್ನು ಹಾಗೂ ವರದಿ ನಿಪಿ-**4** ನ್ನು ನೀಡಿರುತ್ತಾರೆ. ಅವುಗಳನ್ನು ಕಡತಕ್ಕೆ ಸ್ವೀಕರಿಸಿರುತ್ತೇನೆ.

**5.** ದಿ: **13.02.2023** ರಂದು **1, 2, 3** ಹಾಗೂ **6** ಇವರು ನಾಗನೂರ ಗ್ರಾಮದಲ್ಲಿ ಸಿಕ್ಕಿದ್ದು, ಅವರನ್ನು ವಿಚಾರಣೆ ಮಾಡಿದಾಗ ಅವರು ತಪ್ಪು ಮಾಡಿರುವುದನ್ನು ಒಪ್ಪಿಕೊಂಡಿದ್ದರಿಂದ ಅವರನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆದುಕೊಂಡು ಬಂದೆ. ನಂತರ ಅವರ ಸ್ವ-ಇಚ್ಛಾ ಹೇಳಿಕೆ ಪಡೆದೆ. ಆರೋಪಿ ಅರುಣ ನನ್ನೆದುರು "ತಾವು ನನ್ನ ಹಿಂದೆ ಬಂದರೆ ನಾನು ಕೃತ್ಯಕ್ಕೆ ಉಪಯೋಗ

ಮಾಡಿದ ನನ್ನ ಮೋಟಾರ್ ಸೈಕಲನ್ನು ತೋರಿಸಿ ಹಾಜರುಪಡಿಸುತ್ತೇನೆ" ಅಂತ ಹೇಳಿಕೆ ನೀಡಿರುತ್ತಾರೆ. (ಅದನ್ನು ನಿಪಿ-**37** ಅಂತ ಗುರುತಿಸಲಾಯಿತು). ಆರೋಪಿ ವಿಠ್ಠಲ ನನ್ನೆದುರು "ತಾವು ನನ್ನ ಹಿಂದೆ ಬಂದರೆ ನಾನು ಕೃತ್ಯಕ್ಕೆ ಉಪಯೋಗ ಮಾಡಿದ ನನ್ನ ಮೋಟಾರ್ ಸೈಕಲನ್ನು ತೋರಿಸಿ ಹಾಜರುಪಡಿಸುತ್ತೇನೆ" ಅಂತ ಹೇಳಿಕೆ ನೀಡಿರುತ್ತಾರೆ. (ಅದನ್ನು ನಿಪಿ-**38** ಅಂತ ಗುರುತಿಸಲಾಯಿತು). ಆರೋಪಿ ವೆಂಕಪ್ಪ ನನ್ನೆದುರಿಗೆ "ತಾವು ನನ್ನ ಹಿಂದೆ ಬಂದರೆ ನಾನು ಕೃತ್ಯಕ್ಕೆ ಉಪಯೋಗ ಮಾಡಿದ ನನ್ನ ಮೋಟಾರ್ ಸೈಕಲನ್ನು ತೋರಿಸಿ ಹಾಜರುಪಡಿಸುತ್ತೇನೆ" ಅಂತ ಹೇಳಿಕೆ ನೀಡಿರುತ್ತಾರೆ. (ಅದನ್ನು ನಿಪಿ-**39** ಅಂತ ಗುರುತಿಸಲಾಯಿತು).ಆರೋಪಿ ಲೋಕೇಶ ನನ್ನೆದುರಿಗೆ "ತಾವು ನನ್ನ ಹಿಂದೆ ಬಂದರೆ ನಾನು ಕೃತ್ಯಕ್ಕೆ ಉಪಯೋಗ ಮಾಡಿದ ನನ್ನ ಮೋಟಾರ್ ಸೈಕಲನ್ನು ತೋರಿಸಿ ಹಾಜರುಪಡಿಸುತ್ತೇನೆ" ಅಂತ ಹೇಳಿಕೆ ನೀಡಿರುತ್ತಾರೆ. (ಅದನ್ನು ನಿಪಿ-**40** ಅಂತ ಗುರುತಿಸಲಾಯಿತು).

**6.** ಚಾಸಾ-**4** ಹಾಗೂ **5** ಇವರ ಸಮಕ್ಷಮದಲ್ಲಿ ಆರೋಪಿತರು ಹಾಜರುಪಡಿಸಿದ ಮೋಟಾರ್ ಸೈಕಲನ್ನು ನಿಪಿ-**2** ರಂತೆ ಪಂಚನಾಮೆಯನ್ನು ಮಾಡುವ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಫೋಟೊಗಳನ್ನು ತೆಗೆಸಿದ್ದೇನೆ. ಆರೋಪಿತನ್ನು ದಸ್ತಗಿರಿ ನಿಯಮ ಪಾಲಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿ: **15.02.2023** ರಂದು ಚಾಸಾ-**11** ರವರು ತೋರಿಸಿದ ಬ್ಯಾನರ ಹರಿದು ಒಗೆದ ಜಾಗೆಯ ಪಂಚನಾಮೆ ನಿಪಿ-**8** ನ್ನು ಚಾಸಾ-**6** ಹಾಗೂ **7** ರವರ ಸಮಕ್ಷಮದಲ್ಲಿ ಮಾಡಿರುತ್ತೇನೆ.

**7.** ದಿ: **28.02.2023** ರಂದು ಚಾಸಾ-**17** ಇವರಿಂದ ನಿಪಿ-**19** ರಿಂದ **28** ರ ದಾಖಲೆಗಳನ್ನು ಪಡೆದಿರುತ್ತೇನೆ. ದಿ: **03.03.2023** ರಂದು ಈಗ ನೋಡುತ್ತಿರುವ ಎಫ್.ಎಸ್.ಎಲ್. ವರದಿಯನ್ನು ಸ್ವಕರಿಸಿರುತ್ತೇನೆ. (ಅದನ್ನು ನಿಪಿ-**41** ಅಂತ ಗುರುತಿಸಲಾಯಿತು). ದಿ: **06.05.2023** ರಂದು ಚಾಸಾ-**16** ರವರು ಚಾಸಾ-**10** ರವರ ಗಾಯದ ಪ್ರಮಾಣ ಪತ್ರ ನಿಪಿ-**31** ನ್ನು ನೀಡಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ: **30.05.2023** ರಂದು ಚಾಸಾ-**19** ಇವರು ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಮೋಟಾರ್ ಸೈಕಲ ನಂ. ಕೆಎ-**48**/ಎಸ್-**4324** ನೇದ್ದನ್ನು ಹಾಜರುಪಡಿಸಿದ್ದು, ಅದನ್ನು ಚಾಸಾ-**8** ಮತ್ತು **9**

ರವರ ಸಮಕ್ಷಮದಲ್ಲಿ ನಿಪಿ-**2** ರಂತೆ ಪಂಚನಾಮೆ ಮಾಡಿ ಜಪ್ತ ಮಾಡಿಕೊಂಡಿರುತ್ತೇನೆ. ನಂತರ ಜಪ್ತಾದ ವಸ್ತುಗಳ ಬಗ್ಗೆ ನ್ಯಾಯಾಲಯಕ್ಕೆ ಮುದ್ದೆಮಾಲು ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**8.** ದಿ: **05.06.2023** ರಂದು ಈಗ ನೋಡುತ್ತಿರುವ ಘಟನಾ ಜಾಗೆಯ ಉತಾರೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. (ಅದನ್ನು ನಿಪಿ-**42** ಅಂತ ಗುರುತಿಸಲಾಯಿತು). ದಿ: **13.06.2023** ರಂದು ಆಯುಧ ಅಭಿಪ್ರಾಯವನ್ನು ಕೋರಿ ಚಾಸಾ-**16** ಇವರಿಗೆ ನಿಪಿ-**32** ರಂತೆ ಪತ್ರ ಬರೆದಿರುತ್ತೇನೆ. ಅವರು ನಿಪಿ-**33** ರಂತೆ ಅಭಿಪ್ರಾಯ ನೀಡಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

**9.** ತನಿಖೆಯಲ್ಲಿ ಲಭ್ಯವಾದ ಸಾಕ್ಷ್ಯಾಧಾರಗಳನ್ನು ಗಮನಿಸಿದಾಗ ಆರೋಪಿ ನಂ. **4** ಮತ್ತು **5** ಇವರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಿಲ್ಲದ ಕಾರಣ ಅವರನ್ನು ಕೈ ಬಿಟ್ಟು ಉಳಿದವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಪೊಲೀಸ್ ಅಧೀಕ್ಷಕರಿಗೆ ಅರ್ಜಿ ಸಲ್ಲಿಸಿದೆ. ನನಗೆ ವರ್ಗಾವಣೆಯಾಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-**22** ರವರು ಮಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಗುರುತಿಸುತ್ತೇನೆ.

**<u>ಪಾಟಿಸವಾಲು: ಆರೋಪಿ ಪರ ಶ್ರೀಮತಿ.ಜೆ.ಎಸ್.ಜೆ. ವಕೀಲರಿಂದ:</u>**

**1.** ನಾನು ದಿ: **31.01.2023** ರಂದು ಸಾಕ್ಷಿದಾರರ ಪುರವಣಿ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ, ಚಾಸಾ-**2** ಮತ್ತು **3** ರವರ ಸಮಕ್ಷಮ ನಿಪಿ-**11** ರಂತೆ ಯಾವುದೇ ಪಂಚನಾಮೆ ಮಾಡಿಲ್ಲ, ಮುಮಾ-**1** ರಿಂದ **6** ನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಚಾಸಾ-**1** ರವರು ಹಾಜರುಪಡಿಸಿದಂತೆ ಚಾಸಾ-**2** ಹಾಗೂ **3** ರವರ ಸಮಕ್ಷಮ ಮುಮಾ-**7** ರಿಂದ **9** ಇವುಗಳನ್ನು ವಶಪಡಿಸಿಕೊಂಡಿದ್ದೇನೆ ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**2.** ನಿಪಿ-**2** ರಂತೆ ಯಾವುದೇ ಪಂಚನಾಮೆ ಮಾಡಿಲ್ಲ, ಮೋಟಾರ್ ಸೈಕಲನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪಂಚರ ಸಮಕ್ಷಮದಲ್ಲಿ ಬ್ಯಾನರ ಹರಿದ ಪಂಚನಾಮೆ ಮಾಡಿದ್ದೇನೆ ಅಂತ ಸುಳ್ಳು

**ಎಸ್.ಸಿ.ಸಂಖ್ಯೆಃ10022/2025**
**ಪ್ರಾ.ಸಾ.ಸಂಖ್ಯೆಃ 14**
**ಚಾ.ಸಾ.ಸಂಖ್ಯೆಃ 21**

ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಗಾಯಾಳುಗಳ ಗಾಯದ ಪತ್ರಗಳನ್ನಾಗಲಿ, ಚಿಕಿತ್ಸೆಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ್ದೇನೆ ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮುಂದೆ ಯಾವುದೇ ಸ್ವ-ಖುಷಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**3.** ಆರೋಪಿತರು ಯಾವುದೇ ಅಪರಾಧ ಮಾಡಿಲ್ಲದೇ ಇದ್ದರೂ ಕೂಡ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿಕೊಂಡು ಖೊಟ್ಟಿ ತನಿಖೆ ಮಾಡಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮುಧೋಳ.**